doc-42
T.P-2

Regd No M 1229 | 43rd Year | Sri 'Satyavadi' Mysore | 27—4—1959

ಪ್ರಮುಖ ವ್ಯಾಪಾರಿಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸಂಸ್ಥಾಪಕರು— ಅಂಮನೆ ಸಿಂಸ್ಕೇದಾರ್ ಎ. ಏ ಸುಬ್ಬರಾಯುರು | ಬಿಡಿ ಪ್ರತಿ 3ಪೈ

Protectthe cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ನೈತಿಕತೆಯ ಮೇಲೆ ಮುಂದಿನ ಜನಾಂಗ ಅವಲಂಬನೆ

ಬೆಂಗಳೂರು 26 — ಆಯುಧಗಳ ಮೇಲೆ ಮುಂದಿನ ಮಾನವ ಜನಾಂಗ ಅವಲಂಬಿಸದೆ ಉನ್ನತ ನೈತಿಕತೆ ಮೇಲೆ ಅವಲಂಬಿಸುವದಾಗಿ ಮೈಸೂರಿನ ರಾಜ್ಯಪಾಲರಾದ ಮಂಗಳದಾಸ ಪಕ್ಕಾಸಿ ತಿಳಿಸಿದರು ಶಾಲೆಯಲ್ಲಿ ಧಾರ್ಮಿಕ ಶಿಕ್ಷಣ ಕೊಡಬೇಕೆಂದು ಅವರು ತಿಳಿಸಿದರು

ರಥೋತ್ಸವ

ಟಿ ನರಸೀಪುರದ ತಾಲ್ಲೂ ಕೃಷ್ಣಾಪುರದಲ್ಲಿಂವ ಶ್ರೀ ಸಂತಾನ ಗೋಪಾಲ ಕೃಷ್ಣಸ್ವಾಮಿಯವರಿಗೆ ಬ್ರಹ್ಮೋತ್ಸವವು ನಡೆಯುತ್ತದೆ. ತಾ|| 1-5-59 ರಾತ್ರಿಯಿಂದ 11-5-59 ರ ವರೆಗೆ ಬ್ರಹ್ಮೋತ್ಸವವು ನಡೆಯುತ್ತದೆ. 8 ನೇ ತಾ|| ಶುಕ್ರವಾರ ಶುಭಕಾಲದಲ್ಲಿ ರಥೋತ್ಸವ ನಡೆಯುತ್ತದೆ

ನಿರಾಶ್ರಿತರಿಗೆ ನೆಲೆ

ಷಿಲಾಂಗ್ 26 — ರೂ 2 ವರೆ ಲಕ್ಷ ವೆಚ್ಚದಲ್ಲಿ ನೇಫಾ ಭಾಗದ ಕಮೆಂಗಿನಲ್ಲಿ ಟಿಬೆಟ್ಟಿನ ನಿರಾಶ್ರಿತರಿಗೆ ನಿರಾಶ್ರಿತ ಶಿಬಿರ ನಿರ್ಮಿಸಲಾಗುವದು

ಹೆಚ್ಚು ವೇತನ ಕೊಡುವದು ಸರಿಯಲ್ಲವೆಂದು ನೆಹರು

ನವ ದೆಹಲಿ 25 — ನಿವೃತ್ತ ಕೆಲಸಗಾರರಿಗೆ ಅಧಿಕವೇತನವನ್ನು ಖಾಸಗಿ ಸಂಸ್ಥೆಗಳು ಕೊಡುವದು ಸರಿಯಲ್ಲವೆಂದು ಈ ವಿಷಯದಲ್ಲಿ ಏನಾದರೂ ಮಾಡಬೇಕೆಂದೂ ತಿಳಿಸಿದರು.

ರೂ 55 ಲಕ್ಷ ಜುಲ್ಮಾನೆ

ನವ ದೆಹಲಿ 26 — ಪ್ರಖ್ಯಾತ ಕೈಗಾರಿಕೋದ್ಯಮಿ ಶ್ರೀ ಎಸ್ ಪಿ ಜೈನ್ ರವರನ್ನು ರೂ 55 ಲಕ್ಷ ದಂಡ ತೆರುವಂತೆ ಕೇಳಲಾಗಿದೆಯೆಂದು ಗೊತ್ತಾ

ನೀಗ್ರೋವಿನ ಅಪಹರಣ

ವಾಷ್ಟಿಂವಿಲ್ಲೆ (ಮಿಸಿಸಿಪ್ಪಿ) 26 ಶ್ವೇತ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿದ ಆರೋಪದ ಮೇಲೆ ಅಂಕ್ಷಿತ ಬಂದೀಖಾನೆಯಲ್ಲಿಡಲಾಗಿದ್ದ 23 ವರ್ಷದ ನೀಗ್ರೋ ಶರೂಣನನ್ನು ಸಶಸ್ತ್ರ ಆಯುಧ ಸಮೇತ ಬಂದ ಗುಂಪು ಅಪಹರಿಸಿತು.

ಫೋರ್ಡ್ಜರಿ

ನವ ದೆಹಲಿ 26 — ಪಾಕಿಸ್ತಾನ ವಿಮಾನ ಬಲದವರು ಕೆಲವು ದಿನಗಳ ಹಿಂದೆ ಭಾರತ ವಿಮಾನವನ್ನು ಕೆಳಗುರುಳಿಸಿ ಅನಂತರ ವಿಮಾನ ಚಾಲಕರಿತ್ತರೆಂಬ ಹೇಳಿಕೆ ಫೋರ್ಜರಿಯದೆಂದು ಹೇಳಲಾಗಿದೆ.

ರಪ್ತು ಹೆಚ್ಚಿಸಿ

ಕಲ್ಕತ್ತಾ 26 — ಕೈಗಾರಿಕಾ ಮಂತ್ರಿ ಶ್ರೀ ಲಾಲ ಬಹದ್ದೂರಶಾಸ್ತ್ರಿಯವರು ಭಾರತ ಫ್ಲಾಸ್ಟಿಕ್ಸ್ ಸಮ್ಮೇಳನವನ್ನು ಪ್ರಾರಂಭಗೊಳಿಸುತ್ತಾ ಪ್ಲಾಸ್ಟಿಕ್ಸ್ ಕೈಗಾರಿಕೆ ರಫ್ತನ್ನು ಹೆಚ್ಚಿಸಬೇಕೆಂದು ತಿಳಿಸಿದರು.

ಕಾರ್ಮಿಕರ್ಲ್ ಪರಿಷತ್ತು ?

ಲಂಡನ್ 26 — ನಾಲ್ಕು ರಾಷ್ಟ್ರಗಳ ಮಾತುಕತೆಗೆ ಮೊದಲು ದೆಹಲಿಯಲ್ಲಿ ಕಾಮನ್ವೆಲ್ತ್ ರಾಷ್ಟ್ರಗಳ ಉನ್ನತ ಸಮ್ಮೇಳನ ಸೇರುವದೇ ಎಂಬ ಪ್ರಶ್ನೆಗೆ ನನಗೇನು ಗೊತ್ತಿಲ್ಲ ಎಂದು ವಿದೇಶ ಇಲಾಖೆ ಪ್ರಮುಖರೋರ್ವರು ತಿಳಿಸಿದರು

ಯಾರಿಗೂ ಸೇರಿದ್ದಲ್ಲ

ಬೊಂಬಾಯಿ 25 — ಬೊಂಬಾಯಿ ಸರ್ವ ಜನರ ನಗರ ಮಂತ್ರಿಯವರಿಗೆ ಸೇರಿದ್ದಲ್ಲ ಗುಜರಾತಿಯವರಿಗೆ ಸೇರಿದ್ದಲ್ಲ ಎಂದು ಶ್ರೀ ವಿ ಕೆ ಕೃಷ್ಣಮೆನನ್ ತಿಳಿಸಿದರು

ಮುಖ್ಯ ಮಂತ್ರಿಯವರ ಮನೆಯ ಮುಂದೆ ಸತ್ಯಾಗ್ರಹ ಪ್ರಯತ್ನ

ಬೆಂಗಳೂರು 26 — ಮುಖ್ಯಮಂತ್ರಿಯವರ ನಿವಾಸಸ್ಥಾನ ಬಾಲೂಬ್ರೂಯಿಯ ಮುಂದೆ ಸತ್ಯಾಗ್ರಹ ಹೂಡಲು ಬಂದ ಕೋಲಾರ ಜಿಲ್ಲೆಯ 8 ರಾಜಕೀಯ ಬಂದಿಗಳನ್ನು ಪೋಲೀಸರು ಬಂಧಿಸಿದರು ರಾಜಕೀಯ ಸಂತ್ರಸ್ತರಿಗೆ ಭೂಮಿ ದೊರೆಯಬೇಕೆಂಬ ಬೇಡಿಕೆ ಈಡೇರುವ ವರೆಗೆ ಸತ್ಯಾಗ್ರಹ ಮಾಡಲು ಅವರು ನಿರ್ಧರಿಸಿದ್ದರು.

ಪ್ರತ್ಯೇಕ ವಲಯ ಅಪೇಕ್ಷೆ

ಕೊಯಮ್ಮತ್ತೂರು 26 — ತಮಿಳು ನಾಡು ಕಾಂಗ್ರೆಸು ಸಮಿತಿ ನಿರ್ಣಯವನ್ನಂಗೀಕರಿಸಿ ದಕ್ಷಿಣ ಆಹಾರ ವಲಯ ರಚನೆ ಮಾಡಿ, ಮದ್ರಾಸು ಪ್ರಾಂತಕ್ಕೆ ಪ್ರತ್ಯೇಕ ಆಹಾರ ವಲಯ ರಚಿಸಬೇಕೆಂದು ತಿಳಿಸಿದೆ

ಪ್ರತಿಭಟನೆ

ಟೆಹರಾನ್ 26 — ರಷ್ಯಾ ವಿಮಾನಗಳು ಗಡಿಭಂಗ ಮಾಡಿದ ಸಂದರ್ಭದಲ್ಲಿ ಇರಾನ್ ಸರ್ಕಾರವು ರಷ್ಯಾಕ್ಕೆ ಪ್ರತಿಭಟಿಸಿದೆ.

ಬಂಧನ

ಕರಾಚಿ 25 — ಸೇನಾಡಳಿತ ಕಾನೂನಿನ ಅನ್ವಯ ಪಾಕಿಸ್ತಾನದ ಭಾರಿ ಬ್ಯೂರಿಯೊಂದರ ಮ್ಯಾನೇಜಿಂಗ್ ಡೈರೆಕ್ಟರೋರ್ವರು ಬಂಧನವಾಗಿದೆ ಈ ಪಾರ್ಸಿ ವಶದಲ್ಲಿದ್ದ ಅನೇಕ ಸಂಗ್ರಹಾಲಯಗಳನ್ನು ಪೋಲೀಸರು ಧಾಳಿ ಮಾಡಿದರು ಇವನ ವಿಚಾರಣೆ ಸೇನಾ ನ್ಯಾಯಾಲಯದಲ್ಲಿ ಆಗಬಹುದು.

× ಷಿಲಾಂಗ್ 26 — ನಾಗಾ ಬೆಟ್ಟಗಳ ರಾಜಕೀಯ ಸ್ಥಿತಿ ಉತ್ತಮಗೊಳ್ಳುತ್ತಿದೆ.

ವಿವಿಧ—ವರ್ತಮಾನ

ಹೈದರಾಬಾದು 26 — ಅಂಧ್ರ ರಾಜಕೀಯ ಸಮ್ಮೇಳನವನ್ನು ಪ್ರಾರಂಭಗೊಳಿಸುತ್ತಾ, ಸಹಕಾರ ವ್ಯವಸಾಯ ಯಶಸ್ಸು ಅದರ ಟೀಕೆಗಾರರ ಬಾಯಿ ಮುಚ್ಚಿಸುತ್ತದೆ ಎಂದು ಭಾರತ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀಮತಿ ಇಂದಿರಾ ಗಾಂಧಿ ತಿಳಿಸಿದರು.

ಹೈದರಾಬಾದು 26 — ಕಾಂಗ್ರೆಸು ನೀತಿಗೆ ಅರಿಗೀಕರಿಸುವದಾದರೆ ಗಣತಂತ್ರ ಪರಿಷತ್ತಿನೊಡನೆ ಒಂದಿಷ್ಟಾ ಕಾಂಗ್ರೆಸು ಮಿಶ್ರ ಮಂತ್ರಿ ಮಂಡಲ ರಚನೆ ಮಾಡುವದಾಗಿ ಕಾಂಗ್ರೆಸಿನ ಅಧ್ಯಕ್ಷೆ ಶ್ರೀಮತಿ ಇಂದಿರಾ ಗಾಂಧಿ ತಿಳಿಸಿದ್ದಾರೆ

ನವ ದೆಹಲಿ 26 — ಸಾರ್ವಜನಿಕ ಆಡಳಿತ ಸಂಸ್ಥೆಯಲ್ಲಿ ಪಂ|| ನೆಹರು ಭಾಷಣ ಮಾಡುತ್ತಾ, ಮದ್ರಾಸಿನಲ್ಲಿ ಪ್ರಾಥಮಿಕ ಶಾಲೆ ವ್ಯಾಸಂಗವನ್ನು ಪ್ರಶಂಸೆ ಮಾಡಿದರು.

ನವ ದೆಹಲಿ 26 — 58-59 ನೆಯ ಸಾಲಿನಲ್ಲಿ ಉಪ್ಪು ಉಳಿತಾಯ ಯೋಜನೆಯಿಂದ ರೂ 78 ಕೋಟಿ ಉತ್ಪನ್ನ ಆಯಿತು ಅದರ ಹಿಂದಿನ ವರ್ಷ 70 ಕೋಟಿ ಉತ್ಪನ್ನವಾಯಿತು.

ಅಗರ್ತಲಾ 26 — ಅಗರ್ತಲಾ ಒಳ ಪಾಕಿಸ್ತಾನ ರಾಷ್ಟ್ರಯರು ಭಾರತದ ಪೋಲೀಸರ ಮೇಲೆ ಗುಂಡುಹಾರಿಸಿದರು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
28 ಪಶ್ಚಿಮ ಪೂರ್ವಾಷಾಢ

ಶಾಸನ ಸಭೆ ಅಧಿವೇಶನ

ಬೆಂಗಳೂರು 26— ಜುಲೈ ಮುಪ್ಪಭಾಗದಲ್ಲಿ ಮೈಸೂರು ಭೂಸುಧಾರಣ ಮಸೂದೆ ಪರ್ಚಿಸಲು ಈ ಶಾಸನಸಭಾ ಅಧಿವೇಶನವು 8–10 ದಿನಗಳು ನಡೆಸಲ್ಪಡುವುದೆಂದು ಮುಖ್ಯ ಮಂತ್ರಿ ಶ್ರೀ ಜತ್ತಿ ಶಾಸನಸಭೆಯಲ್ಲಿ ನಿನ್ನೆ ತಿಳಿಸಿದರು.

ಭಂಗಾರ ವಶ

ಕಾರವಾರ 25— ಸ್ಥಳೀಯ ಆನಂದಭವನ ಹೋಟಲಿನ ಮಾಲೀಕ ಪರಾಂಕರ್ ತನ್ನ ಸೊಂಟಕ್ಕೆ ಸುತ್ತಿಕೊಂಡು ಹೋಗುತ್ತಿದ್ದ ರೂ. 5000 ಮೌಲ್ಯದ 4 ಭಂಗಾರದ ತುಂಡನ್ನು ಅಕ್ರಮ ಸಾಗಾಣಿಕೆ ಮಾಲೆಂದು ಕಾರವಾರ–ಗೋವಾ ಗಡಿಯ ಸಿ ಐ ಡಿ ಅಧಿಕಾರಿಗಳು ವಶಪಡಿಸಿಕೊಂಡರು.

ರಿಕಾರ್ಡುಗಳ ಪತ್ತೆ

ಬಿಜಾಪುರ 25— ಗುಂಡಬವಾಡಿಯ ಒಂದು ಭಾವಿಯಲ್ಲಿ ನೀರು ತೆಗೆಯುತ್ತಿದ್ದಾಗ ಅಲ್ಲಿ ಡೆಪ್ಯೂಟಿಕಮಿಷನರ ಆಫೀಸಿನ ಫೈಲು ಮತ್ತು ರಿಕಾರ್ಡುಗಳನ್ನೊಳಗೊಂಡ ಒಂದು ಟೀಲ ಸಿಕ್ಕಿತು —ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಕಾಂಗ್ರೆಸಿನ ಗೆಲುವು

ಬೋದಿನಾಯಕನೂರು 25— ಇಲ್ಲಿಯ ಪೌರಸಭೆಯಲ್ಲಿನ 24 ಸ್ಥಾನಗಳಲ್ಲಿ 21 ಸ್ಥಾನಗಳನ್ನು ಕಾಂಗ್ರೆಸ್ಸು ಪಕ್ಷ ಪಡೆದಿದೆ.

ಸಹಾಯ ಧನ

ನವದೆಹಲಿ 25— ವಿದ್ಯಾರ್ಥಿಗಳು ಪ್ರವಾಸ ಕೈಗೊಳ್ಳಲು ಸಾಧ್ಯವಾಗುವಂತೆ 58–59 ರಲ್ಲಿ ವಿವಿಧ ರಾಜ್ಯಗಳಲ್ಲಿರುವ 631 ಶಿಕ್ಷಣ ಸಂಸ್ಥೆಗಳಿಗೆ 736367 ರೂಗಳ ಹಣವನ್ನು ಸಹಾಯಧನದ ರೂಪದಲ್ಲಿ ಕೊಡಲಾಯಿತು; ಈ ಪೈಕಿ ಮೈಸೂರು ರಾಜ್ಯದ 41 ಶಿಕ್ಷಣ ಸಂಸ್ಥೆಗಳಿಗೆ 48807 ರೂಗಳ ಹಣವನ್ನು ಕೂಡಲಾಗಿದೆ.

ಉಪ್ಪಿನ ಮಹತ್ವ

ಉಪ್ಪು ಮಾನವಕೋಟಿಗೆ ಅತ್ಯಗತ್ಯ ವಸ್ತುವಾಗಿದೆ: ವಾಣಿಜ್ಯ ಕ್ಷೇತ್ರದಲ್ಲಿ ಉಪ್ಪನ್ನು ನಾಣ್ಯವನ್ನಾಗಿ ಬಳಸಲಾಗಿದೆ; ರೋಮನಗರದಲ್ಲಿ ಸೈನಿಕರಿಗೆ ಅವರ ವೇತನಗಳನ್ನು ಉಪ್ಪಿನ ರೂಪದಲ್ಲಿ ಪಾವತಿ ಮಾಡಲಾಗುತ್ತಿತ್ತು; ಸ್ಯಾಲರಿ (ವೇತನ) ಎಂಬ ಶಬ್ದದಿಂದ ಬಂದಿರುತ್ತದೆ; ಸ್ಯಾಲರಿಯಂ ಎಂದರೆ ಉಪ್ಪು–ಹಣ ಎಂದರ್ಥ.

ಮರುವಸತಿ

ಪೂರ್ವ ಪಾಕಿಸ್ತಾನದಲ್ಲಿ ಮನೆಮಠ ಭೂಮಿಕಾಣಿಕೆಗಳನ್ನು ಬಿಟ್ಟು ಬಂದಿರುವ ಸ್ಥಾನಪಲ್ಲಟರಿಗೆ ಅಂಡಮಾನ್ ದ್ವೀಪಗಳಲ್ಲಿ ಪುನರ್ವಸತಿ ಸೌಕರ್ಯ ಕಲ್ಪಿಸಲಾಗಿದೆ; ಅಲ್ಲಿ ಅವರಿಗೆ ಸಾಗುವಳಿ ಮಾಡುವ ಜಮೀನು, ವಾಸಕ್ಕೆ ಮನೆಗಳು ಒದಗಿಸುವ ವ್ಯವಸ್ಥೆ ನಡೆದಿದೆ.

ನವ ದೆಹಲಿ 26 — ಭಾರತದ ಉಪಾಧ್ಯಕ್ಷ ಡಾ|| ಎಸ್. ರಾಧಾಕೃಷ್ಣನ್ ಅವರು ದೆಹಲಿ ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾದರು.

ಪಕ್ಕದ ಚಿತ್ರ

1 137000 ಬೆಂಕಿ ಚಿಟ್ಟೆಗಳು 60 ವಾಟ್ ಬಲ್ಬಿಗೆ ಸೆಳೆ

2 ಪ್ರಪಂಚದ ಅತಿ ಆಳವಾದ ಗಣಿ ಎಂದರೆ ಕೋಲಾರದ ಗಣಿ

3 ಶಕ್ತಿಯು ಪೈಕಿ ನಿಸರ್ಗ ಶಕ್ತಿ ಒಂದು

ಅಪೆರಾ— 26–4–59 ರಿಂದ

ಇಬ್ಬರು ಸಹೋದರಿಯರು ತಮಿಳು

ಪಾತ್ರ— ಜಮುನಾ ಗಣೇಶ್, ಸಾವಿತ್ರಿ, ನಂಬಿಯಾರ್, ಗಿರಿಜಾ, ದೊರೈರಾಜ್

ಪ್ರತಿದಿನ 3 ಆಟಗಳು

ವುಡ್‌ಲಾಂಡ್ಸ್

Glorious 4th Week

ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬೇಕೆನ್ನಿಸುವ ಚಿತ್ರ

ಅನಾಡಿ

(ಹಿಂದಿ)

ತಾರಾಗಣ: ನೂತನ್, ರಾಜ್ ಕಪೂರ್

ಮೋತೀಲಾಲ್, ಶುಭಾ ಖೋಟೆ

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ



Edited, Printed & Published by Dharma Prachara Niraja M. S. Krishna Rao, at the Satyavadi Press Chamarajapuram, Mysore.